
# ಶೈನಿಂಗ್ ಶೈನ್



ಕಿರುತೆರೆ ಮೂಲಕ ಬೆಳ್ಳಿತೆರೆಗೆ ಕಾಲಿಟ್ಟು ನಿಧಾನಕ್ಕೆ ತಮ್ಮ ವ್ಯಾಪ್ತಿ ಹಿಗ್ಗಿಸಿಕೊಳ್ಳುತ್ತಿರುವ ನಟ ಶೈನ್ ಶೆಟ್ಟಿ ಹೊಸ ಸಿನಿಮಾವೊಂದಕ್ಕೆ ತಯಾರಿ ನಡೆಸುತ್ತಿದ್ದಾರೆ.

'ಮಿಥ್ಯ' ಸಿನಿಮಾ ನಿರ್ದೇಶಕ ಸುಮಂತ್ ಭಟ್ ಅವರ ಸಿನಿಮಾದಲ್ಲಿ ನಟಿಸಲು ಒಪ್ಪಿಗೆ ನೀಡಿದ್ದು, ತಯಾರಿಯಲ್ಲಿ ತೊಡಗಿಕೊಂಡಿದ್ದಾರೆ.

'ಕಾಂತಾರ' ಸಿನಿಮಾದಲ್ಲಿ ಗಮನಾರ್ಹ ಪಾತ್ರದಲ್ಲಿ ಕಾಣಿಸಿಕೊಂಡ ಶೈನ್ ಶೆಟ್ಟಿ, ಬಾಬಿ ಸಿಆರ್ ನಿರ್ದೇಶನದ 'ಜಸ್ಟ್ ಮ್ಯಾರೀಡ್' ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಶೈನ್ ಶೆಟ್ಟಿ ಮುಖ್ಯಪಾತ್ರದಲ್ಲಿದ್ದು, ಇದೇ ಆಗಸ್ಟ್ 22ಕ್ಕೆ ಸಿನಿಮಾ ಬಿಡುಗಡೆಯಾಗಲಿದೆ. ಅವರ ನಟನೆಯ 'ನಿದ್ರಾದೇವಿ ನೆಕ್ಸ್ಟ್ ಡೋರ್' ಕೂಡ ಸೆಪ್ಟೆಂಬರ್ 12ಕ್ಕೆ ಬಿಡುಗಡೆಯಾಗುತ್ತಿದೆ.

ಈ ನಡುವೆಯೇ ಸುಮಂತ್ ಭಟ್ ಅವರೊಂದಿಗೆ ಹೊಸ ಸಿನಿಮಾ ಮಾತುಕತೆ ನಡೆದಿದೆ. ಈ ಹಿಂದೆ 'ಏಕಂ' ಸಿನಿಮಾ ಇಬ್ಬರ ಕಾಂಬಿನೇಷನ್‌ನಲ್ಲಿ ಮೂಡಿಬಂದಿತ್ತು. ಇದೀಗ ಎರಡನೇ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ.

"ಈ ಸಿನಿಮಾ ಆರಂಭಿಕ ಹಂತದಲ್ಲಿದೆ. ಸ್ಕ್ರಿಪ್ಟ್ ಅಂತಿಮಗೊಳಿಸಲಾಗಿದೆ. ನಾನು ಮಿಥ್ಯ ಸಿನಿಮಾ ನೋಡಿದ್ದೆ. 'ಏಕಂ'ನಲ್ಲಿ ಅವರೊಂದಿಗೆ ಕೆಲಸ ಮಾಡಿದ್ದೆ. ಅವರ ಫಿಲ್ಮ್ ಮೇಕಿಂಗ್ ಶೈಲಿ ನನಗೆ ಬಹಳ ಇಷ್ಟ. ನಟರಾದವರು, ಕೆಲವು ನಿರ್ದೇಶಕರೊಂದಿಗೆ ಕೆಲಸ ಮಾಡಬೇಕು ಎಂದು ಬಯಸುತ್ತಾರೆ. ಹಾಗೇ ಸುಮಂತ್ ಭಟ್ ಅವರೊಂದಿಗೆ ಮತ್ತೆ ಕೆಲಸ ಮಾಡಬೇಕು ಎಂದು ನನಗೆ ತುಂಬಾ ಆಸೆ ಇತ್ತು. ಅದಕ್ಕೆ ಅವಕಾಶ ಕೂಡಿಬಂದಿದೆ" ಎಂದು ಮಾಹಿತಿ ನೀಡಿದ್ದಾರೆ ಶೈನ್ ಶೆಟ್ಟಿ. ■

# ಹಾರರ್‌ಪ್ರಿಯ ಸಂಗೀತಾ



ಪುಟ್ಟ ಬ್ರೇಕ್‌ನಲ್ಲಿದ್ದ ನಟಿ ಸಂಗೀತಾ ಶೃಂಗೇರಿ ಹಾರರ್ ಸಿನಿಮಾದೊಂದಿಗೆ ಮರಳಿದ್ದಾರೆ.

'ಬಿಗ್‌ಬಾಸ್' ರಿಯಾಲಿಟಿ ಶೋ ಮುಗಿಯುತ್ತಿದ್ದಂತೆ ಸಂಗೀತಾ ಅಭಿನಯದ 'ಮಾರಿಗೋಲ್ಡ್' ಸಿನಿಮಾ ಬಿಡುಗಡೆಯಾಗಿತ್ತು. ನಂತರ ಯಾವುದೇ ಸಿನಿಮಾಗೂ ಅವರು ಸಹಿ ಹಾಕಿರಲಿಲ್ಲ. ಇದೀಗ ಹಾರರ್ ಜಾನರ್‌ನ ದ್ವಿಭಾಷಾ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

'ಬಿಗ್‌ಬಾಸ್ ನಂತರ ಬ್ರೇಕ್ ತೆಗೆದುಕೊಂಡಿದ್ದೆ. ಆ ಬ್ರೇಕ್‌ನಲ್ಲಿ ಕುಟುಂಬದೊಂದಿಗೆ ಟ್ರಾವೆಲಿಂಗ್ ಮಾಡುತ್ತಾ ಸಮಯ ಕಳೆದೆ. ಒಂದು ಡೆಡಿಕೇಟೆಡ್ ತಂಡದೊಂದಿಗೆ ಕೆಲಸ ಮಾಡಬೇಕೆಂದು ಬಯಸಿದ್ದೆ. ಈಗ ಮರಳುವ ಸಮಯ ಬಂದಿದೆ. ಈ ಸಿನಿಮಾ ನನಗೆ ಉತ್ತಮ ಅವಕಾಶವೆನಿಸಿತು' ಎಂದು ವಿವರಿಸಿದ್ದಾರೆ.

ಹೊಸ ಸಿನಿಮಾ ಬಗ್ಗೆ ಸಂದರ್ಶನವೊಂದರಲ್ಲಿ ಮಾತನಾಡಿರುವ ಅವರು, 'ಈ ಕಥೆ ನನ್ನ ಪಾತ್ರದ ಸುತ್ತ ಸುತ್ತುತ್ತದೆ. ಪ್ರೀತಿಯ ಕಥೆಯೂ ಸೇರಿಕೊಂಡಿದೆ. ಈ ಸಿನಿಮಾ, ಕಲಾವಿದೆಯಾಗಿ ನನಗೆ ಸವಾಲು ಒಡ್ಡುತ್ತದೆ. ಹಾರರ್ ಎಂದರೆ ನನಗೆ ತುಂಬಾ ಇಷ್ಟ. ಹಾರರ್ ಎಂದಮಾತ್ರಕ್ಕೆ ಸಿನಿಮಾದಲ್ಲಿ ಕೇವಲ ಭಯಾನಕತೆ ಇರುತ್ತದೆ ಎಂದಲ್ಲ, ಹಾಸ್ಯ, ಭಾವನೆ ಹಾಗೂ ಉತ್ತಮ ಸ್ಟೋರಿಲೈನ್ ಕೂಡ ಇದೆ' ಎಂದು ಮಾಹಿತಿ ನೀಡಿದ್ದಾರೆ.

ಈ ಸಿನಿಮಾ ಒಂದೇ ಬಾರಿಗೆ ತಮಿಳು ಹಾಗೂ ಕನ್ನಡದಲ್ಲಿ ಚಿತ್ರೀಕರಣಗೊಳ್ಳುತ್ತಿದೆ. ತಮಿಳಿನಲ್ಲಿಯೂ ಸಂಗೀತಾ ನಟಿಸುತ್ತಿದ್ದಾರೆ.

"'ಚಾರ್ಲಿ' ಸಿನಿಮಾವನ್ನು ತಮಿಳಿಗೆ ಡಬ್ ಮಾಡಲಾಗಿತ್ತು. ಈ ಸಿನಿಮಾವನ್ನು ಕನ್ನಡ ಹಾಗೂ ತಮಿಳು ಎರಡರಲ್ಲಿಯೂ ಶೂಟ್ ಮಾಡಬೇಕಿದೆ. ಈ ಕೆಲಸ ಸವಾಲಿನದ್ದಾಗಿದೆ, ಈ ಸವಾಲನ್ನು ತೆಗೆದುಕೊಳ್ಳಲು ಖುಷಿ ಇದೆ" ಎಂದಿದ್ದಾರೆ.

ಹೊಸಬರಾದ ಜಗನ್ ಅಲೋಷಿಯಸ್ ರಾಜು ಈ ಸಿನಿಮಾ ನಿರ್ದೇಶಿಸುತ್ತಿದ್ದಾರೆ. ಪ್ರಿಶೂಟ್ ಕೆಲಸ ಆರಂಭವಾಗಿದೆ. ■